**<u>ದಿನಾಂಕಃ 04.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ః ವಾದಿ ಪರ ಶ್ರೀ ಎಸ್ ಬಿ ಡಿ ವಕೀಲರಿಂದಃ</u>**

1) ವಾದಿ ನನ್ನ ಸಂಬಂಧಿಕರು ಎಂದರೆ ಸರಿ. ದಾವಾ ಸ್ವತ್ತನ್ನು ನನಗೆ ಬಾಡಿಗೆಗೆ ನೀಡುವ ಪೂರ್ವದಲ್ಲಿ ವಾದಿ ಆ ಸ್ವತ್ತಿನ ಮಾಲೀಕರು ಆಗಿದ್ದರು ಎಂದರೆ ಸಾಕ್ಷಿಯು ನನಗೆ ಕ್ರಯಪತ್ರ ಬರೆದುಕೊಡುವ ಪೂರ್ವದಲ್ಲಿ ಆಕೆ ಮಾಲೀಕರಾಗಿದ್ದು ತಾನು ಬಾಡಿಗೆದಾರನಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ನನಗೆ ಬಾಡಿಗೆಗೆ ನೀಡುವ ಪೂರ್ವದಲ್ಲಿ ಆ ಸ್ವತ್ತಿನ ಎಲ್ಲಾ ಕಂದಾಯ ದಾಖಲೆಗಳು ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ತಾನು ದಾವಾ ಸ್ವತ್ತನ್ನು ಬಾಡಿಗೆಗೆ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಫೆಬ್ರವರಿ-2008ನೇ ಸಾಲಿನಲ್ಲಿ ನಾನು ವಾದಿಯ ಬಳಿ ದಾವಾ ಸ್ವತ್ತನ್ನು ಬಾಡಿಗೆಗಾಗಿ ಕೇಳಿದ್ದೇನು ಎಂದರೆ ಸರಿಯಲ್ಲ. ಆ ರೀತಿ ನಾನು ಬಾಡಿಗೆಗೆ ಕೇಳಿದ ಸಂದರ್ಭದಲ್ಲಿ ದಾವಾ ಸ್ವತ್ತಿನ ಎಲ್ಲಾ ದಾಖಲೆಗಳು ವಾದಿಯ ಹೆಸರಿನಲ್ಲಿ ಇದ್ದ ಕಾರಣ ಆಕೆ ದಾವಾ ಸ್ವತ್ತನ್ನು ನನಗೆ ಬಾಡಿಗೆಗಾಗಿ ನೀಡಲು ಒಪ್ಪಿದ್ದರು ಎಂದರೆ ಸರಿಯಲ್ಲ.

2) ದಾವಾ ಸ್ವತ್ತನ್ನು ಫೆಬ್ರವರಿ-2008ನೇ ಸಾಲಿನಲ್ಲಿ ಡಿಟಿ ರಾಮು ರವರ ಜ್ಞಾಪಕರ್ತವಾಗಿ ವಸತಿ ನಿಲಯವನ್ನು ನಡೆಸಲು ಬಾಡಿಗೆಗೆ ಪಡೆದುಕೊಂಡಿದ್ದೇನು ಎಂದರೆ ಸರಿಯಲ್ಲ. ಡಿಟಿ ರಾಮು ರವರ ಜ್ಞಾಪಕರ್ತವಾಗಿ ವಸತಿ ನಿಲಯವನ್ನು ನಡೆಸಲು ದಾವಾ ಸ್ವತ್ತನ್ನು ಬಾಡಿಗೆಗೆ ಪಡೆದುಕೊಂಡು ನಂತರ ಆ ರೀತಿ ವಸತಿ ನಿಲಯವನ್ನು ನಾನು ಮಾಡದೆ ನನ್ನ ಸ್ವಂತ ವಾಸಕ್ಕಾಗಿ ದಾವಾಸ್ವತ್ತನ್ನು ಬಳಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ಫೆಬ್ರವರಿ-2008ನೇ ಸಾಲಿನಲ್ಲಿ ಬಾಡಿಗೆಗಾಗಿ ಪಡೆದುಕೊಂಡು ಬಾಡಿಗೆ ಮೊತ್ತವನ್ನು ಸಹ ಪಾವತಿ ಮಾಡಿದ್ದೇನು ಎಂದರೆ ಸರಿಯಲ್ಲ. ಸಾಕ್ಷಿಯು ತಾನು ದಾವಾಸ್ವತ್ತನ್ನು ಖರೀದಿ ಮಾಡುವ ಸಲುವಾಗಿ ಕ್ರಯ ಕರಾರು ಪತ್ರ ಮಾಡಿಕೊಂಡಿರುವುದಾಗಿ ನುಡಿಯುತ್ತಾರೆ. ನಾನು ದಾವಾಸ್ವತ್ತನ್ನು ಫೆಬ್ರವರಿ-2008ನೇ ಸಾಲಿನಲ್ಲಿ ಬಾಡಿಗೆಗಾಗಿ ಪಡೆದು ನಂತರ

ಸೆಪ್ಟಂಬರ್-2018ರ ವರೆಗೂ ಸತತವಾಗಿ ಬಾಡಿಗೆಯನ್ನು ವಾದಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

3) ದಾವಾ ಸ್ವತ್ತನ್ನು ನಾನು ವಾದಿಯಿಂದ ಖರೀದಿ ಮಾಡುವ ಸಲುವಾಗಿ ವಾದಿ ನನ್ನ ಜೊತೆ ಯಾವುದೇ ರೀತಿ ಮಾತುಕತೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ಕಾಲಕ್ಕೆ ನಾನು ವಾದಿಗೆ ಒಟ್ಟು ರೂ.7200/- ಹಣವನ್ನು ಬಾಡಿಗೆ ಬಾಕಿ ನೀಡಬೇಕು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ಬಾಡಿಗೆಗೆ ಪಡೆದುಕೊಂಡಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸೆಪ್ಟಂಬರ್-2018ರಿಂದ ನಾನು ವಾದಿಗೆ ಬಾಡಿಗೆ ಹಣವನ್ನು ನೀಡದ ಕಾರಣ ಆಕೆ ನನಗೆ ದಿ 17.01.2019 ರಂದು ಕಾನೂನು ಬದ್ಧವಾಗಿ ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿಯು ತಾನು ಆಕೆಗೆ ನೋಟೀಸ್ ನೀಡಿದ ನಂತರದಲ್ಲಿ ಆಕೆ ತನಗೆ ಆ ರೀತಿ ನೋಟೀಸ್ ನೀಡಿದ್ದಾಗಿ ನುಡಿಯುತ್ತಾರೆ. ದಿ 17.01.2019ರಂದು ವಾದಿಯು ನನಗೆ ನೀಡಿದ ನೋಟೀಸಿಗೆ ನಾನು ಪ್ರತ್ಯುತ್ತರ ನೋಟೀಸ್ ನೀಡಿರುವುದಿಲ್ಲ.

4) ದಾವಾ ಸ್ವತ್ತನ್ನು ಅಕ್ರಮವಾಗಿ ಕಬಳಿಸುವ ಸಲುವಾಗಿ ನಾನು ದಾಖಲೆಗಳನ್ನು ಸೃಷ್ಠಿ ಮಾಡಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.45/2019ರಂತೆ ಪ್ರಕರಣವನ್ನು ವಾದಿಯ ವಿರುದ್ದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ.45/2019ರ ಪ್ರಕರಣದಲ್ಲಿ ನಾನು ಸಲ್ಲಿಸಿದ್ದ ದಾಖಲೆಗಳನ್ನೇ ಭಾಗಶಃ ಈ ಪ್ರಕರಣದಲ್ಲೂ ಸಲ್ಲಿಸಿದ್ದೇನೆ ಎಂದರೆ ಸರಿ. ನಿಡಿ-1ರ ಕ್ರಯ ಕರಾರು ಪತ್ರಕ್ಕೂ ಮತ್ತು ವಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-1ರ ಕ್ರಯ ಕರಾರು ಪತ್ರವು ನೊಂದಾಯಿತ ಆಗಿರದ ಮತ್ತು ಕಾನೂನು ಬಾಹಿರವಾಗಿ ಸೃಷ್ಠಿತವಾಗಿರುವ ಪತ್ರ ಆಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ.45/2019ರ ಪ್ರಕರಣವನ್ನು ದಾಖಲಿಸುವ ಸಲುವಾಗಿ ನಾನು ವಾದಿಗೆ ನಿಡಿ-4ರ ನೋಟೀಸನ್ನು ಕಾನೂನು ಬಾಹಿರವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನೋಟೀಸಿನಲ್ಲಿ ಸುಳ್ಳು ಮಾಹಿತಿಗಳನ್ನು ನೀಡಿರುವುದಾಗಿ ವಾದಿಯು ನಿಡಿ-5ರಂತೆ ಪ್ರತ್ಯುತ್ತರ ನೀಡಿದ್ದರು ಎಂದರೆ ಸರಿ. ನಿಡಿ-6 ರಿಂದ 17ರವರೆಗಿನ ದಾಖಲೆಗಳಿಗೂ ಮತ್ತು ವಾದಿಯ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿ ವಯೋವೃದ್ಧೆ ಆಗಿರುವ ಕಾರಣ ಆಕೆಯ ಸ್ವತ್ತನ್ನು ಕಬಳಿಸಲು ಸುಳ್ಳು

ದಾಖಲೆಗಳನ್ನು ಸೃಷ್ಟಿ ಮಾಡಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5) 2000ನೇ ಸಾಲಿನಲ್ಲಿ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಲುವಾಗಿ ಸಾಕ್ಷಿದಾರರ ಸಮ್ಮುಖದಲ್ಲಿ ವಾದಿಯ ಮನೆಯಲ್ಲಿಯೇ ಮಾತುಕತೆ ಆಗಿತ್ತು. ಆ ರೀತಿ ಮಾತುಕತೆ ಆದ ವಿಚಾರವನ್ನು ನಾವು ಬರವಣಿಗೆ ಮಾಡಿಕೊಂಡಿರಲಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ವಾದಿ ಮಾತುಕತೆ ಮಾಡಿಲ್ಲ, ಕ್ರಯದ ಪ್ರತಿಫಲ ರೂ.2,50,000/- ಹಣ ನಿಗದಿ ಮಾಡಿಲ್ಲ ಮತ್ತು ಆ ಪೈಕಿ ವಾದಿ ನನ್ನಿಂದ ಮುಂಗಡವಾಗಿ ರೂ.2,48,000/- ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಗಂಡ ಮತ್ತು ಮಕ್ಕಳು ಯಾರು ಇರದ ಕಾರಣ ಆಕೆ ಒಬ್ಬಂಟಿಯಾಗಿ ವಾಸ ಮಾಡುತ್ತಿದ್ದು ಆಕೆಯ ಹಕ್ಕನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ವಾದಿ ಮಾಲೀಕಳಾಗಿದ್ದು ಆ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮತ್ತು ಆಕೆಯ ನಡುವೆ ಯಾವುದೇ ಕ್ರಯ ಕರಾರು ಪತ್ರ ಆಗದೆ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾಖಲೆಗಳ ಆಧಾರದಿಂದ ವಾದಿಗೆ ದಾವಾ ಸ್ವತ್ತಿನ ಮೇಲೆ ಇರುವ ಹಕ್ಕನ್ನು ಕಡಿತಗೊಳಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).**

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**